ಏನಾಗಬಹುದು? ದೇವಿಗೆ ದೊಡ್ಡ ಗುಡಿಯೇ ನಿರ್ಮಾಣ ಆಗಬಹುದು. ಸಾವಿರಾರು ಭಕ್ತರು ಬರಬಹುದು. ದೇವಿಯ ಜಾತ್ರೆ ನಡೆಯಬಹುದು. ಪದ್ದಕ್ಕನ ತಲೆತುಂಬಾ ಆ ರಾತ್ರಿ ನೂರಾರು ವಿಚಾರಗಳು ಹಾವಿನಂತೆ ಹರಿದಾಡಿದವು. ಅವಳಿಗೆ ಮುಂಗೋಳಿ ಕೂಗಿದರೂ ನಿದ್ದೆಯ ಸುಳಿವೇ ಕಾಣಲಿಲ್ಲ. ಇಡೀ ರಾತ್ರಿ ಅವಳ ಕಣ್ಣು ಗೊಂಬೆಯಲ್ಲಿ ಆ ಕಾಡುದೇವಿಯ ರೂಪವೇ ತುಂಬಿಕೊಂಡಿತ್ತು.

ಮರುದಿನ ಇಬ್ಬರೂ ಹುರುಪಿನಿಂದ ದಿನಾ ಹೋಗೂಕಿಂತss ಒಂದ ತಾಸ ಮೊದಲ ಎಮ್ಮಿ ಹೊಡ್ಕೊಂಡ ಗುಡ್ಡಕ್ಕ ಹೋದೆವು. ನಮಗಾಗ ಎಮ್ಮೆಗಳತ್ತ ಹೆಚ್ಚು ಲಕ್ಷ್ಯವೇ ಇರಲಿಲ್ಲ. ಪದ್ದಕ್ಕ ಕೈಯಲ್ಲೊಂದು ಚೀಲ ಹಿಡಿದು ಅವಸರವಸರವಾಗಿ ದೇವಿ ಇರುವ ಜಾಗ ತಲುಪಿದಳು. ನಾನು ಸಲಕಿ, ಕೊಡ್ಲಲಿ, ಕುಡುಗೋಲು ಹಿಡಿದುಕೊಂಡು ಅವಳ ಹಿಂದಿಂದೇ ನಡೆದು ದೇವಿಯನ್ನು ಕಂಡೆ.

ಎರಡರಿಂದ ಮೂರು ಫೂಟು ಕಪ್ಪುಕಲ್ಲಿನಲ್ಲಿ ಉತ್ತರಾಭಿಮುಖವಾಗಿ ನಿಂತಿರುವ ದೇವಿಯ ರೂಪವೂ ಆಕರ್ಷಕವಾಗಿ ಕಂಗೊಳಿಸುತ್ತಿತ್ತು. ದೇವಿಯ ಕಣ್ಣುಗಳು ಲಕ್ಷಣವಾಗಿದ್ದವು. ಎದೆಯಲ್ಲಿರುವ ಮೂರು ಮೊಲೆಗಳು ಗಮನ ಸೆಳೆಯುತ್ತಿದ್ದವು. ದೇವಿಗೆ ಯಾವ ಹೆಸರು ಹಿಡಿದು ಕರೆಯಬೇಕೆಂದು ಪದ್ದಕ್ಕನನ್ನು ಕೇಳಿದೆ. ಈ ಅಟ್ವಾರಣ್ಯದಲ್ಲಿ, ಬೆಟ್ಟಗುಡ್ಡಗಳ ಮಧ್ಯೆ ನೆಲೆಸಿದ್ದರಿಂದ ಈ ಅಮ್ಮನಿಗೆ 'ಬೆಟ್ಟದಮ್ಮಾ' ಅಥವಾ 'ಕಾಡುದೇವಿ' ಅಂತ ಕರೆಯೋಣ ಎಂದು ಪದ್ದಕ್ಕ ಸೂಚಿಸಿದಳು. ನನಗೆ 'ಬೆಟ್ಟದಮ್ಮಾ' ಸರಿ ಅನಿಸಿ ನಾನು 'ಬೆಟ್ಟದಮ್ಮ'ನೆಂದೇ ಕರೆತೊಡಗಿದೆ.



ದೇವಿಯ ಸುತ್ತಮುತ್ತಲಿದ್ದ ಗಿಡಗಂಟಿಗಳನ್ನು ನಾನು ಕಡಿದು ಹಸನು ಮಾಡತೊಡಗಿದೆ, ಪದ್ದಕ್ಕ ದೇವಿಯ ಮುಂದಿದ್ದ ಕಲ್ಲು, ಕಸಕಡ್ಡಿ ಗುಡಿಸಲು ಅನಿಗೊಂಡಳು. ಸೂರ್ಯ ನೆತ್ತಿಗೆ ಬರುವ ಹೊತ್ತಿಗೆ ಬೆಟ್ಟದಮ್ಮನ ಸುತ್ತಮುತ್ತಲೂ ನೆಲ ತೊಳೆದ ಗಂಗಾಳಿನಂತೆ ಹೊಳೆಯುತ್ತಿತ್ತು. ದೇವಿಯ ಮೇಲೆ ಅವರಿ ಗಿಡದ ನೆರಳು ಛತ್ರಿಯಂತೆ ಬಾಗಿ ಅವಳ ನೆತ್ತಿಗೆ ನೆರಳಾಗಿತ್ತು.

ಪದ್ದಕ್ಕ ದೇವಿಯನ್ನು ತಾನು ತಂದ ಬಾಟಲಿ ನೀರಿನಿಂದ ಹಸನಾಗಿ ತೊಳೆದಳು. ನಂತರ ಕುಂಕುಮ, ಭಂಡಾರ ದೇವಿಯ ಹಣೆಗೆ ನಯವಾಗಿ ಹಚ್ಚಿದಳು. ಮನೆಯಲ್ಲಿ ದೇವಿಗಾಗಿಯೇ ಮಾಡಿಕೊಂಡು ತಂದಿದ್ದ ನೈವೇದ್ಯವನ್ನು ಮುಂದಿಟ್ಟು, ಕಾಯಿ ಒಡೆದು, ಊದಬತ್ತಿ ಹಚ್ಚಿ ದೇವಿಗೆ ಬೆಳಗುತ್ತಾ, ಮುಂದಿಟ್ಟ ನೈವೇದ್ಯದಲ್ಲಿ ಐದು ಅಗಳು ದೇವಿಯ ಮುಂದೆ ಹಾಕಿ ದೀರ್ಘದಂಡ ನಮಸ್ಕಾರ ಹಾಕಿ ಕಣ್ಣುಮುಚ್ಚಿ ಕುಳಿತುಕೊಂಡಳು. ಅಲ್ಲೇ ಇದ್ದ ಒಂದಿಷ್ಟು ಅವರಿ ಹೂಗಳನ್ನು ದೇವಿಯ ಮುಂದಿಟ್ಟು ನಮಸ್ಕರಿಸಿ, ಪದ್ದಕ್ಕನಂತೆ ನಾನೂ ಕಣ್ಣುಮುಚ್ಚಿ ಕುಳಿತುಕೊಂಡೆ. ಮನದಲ್ಲಿ ನೆಮ್ಮದಿಯ ಗಾಳಿ ಸುಳಿದಂತೆ ಅನಿಸಿತು.

ತಿಂಗಳು ಉರುಳಿದರೂ ಈ ಸುದ್ದಿ ಊರವರಿಗೆ ಗೊತ್ತಾಗಿರಲಿಲ್ಲ. ಅಂದು ಅಮಾವಾಸ್ಯೆ. ಪದ್ದಕ್ಕ ರಾತ್ರೋ ರಾತ್ರಿ ನನ್ನ ಕರೆದುಕೊಂಡು ಗುಡ್ಡದ ಹಾದಿ ತುಳಿಯತೊಡಗಿದಳು. ಅವಳ ಕೈಯಲ್ಲೊಂದು ಚೀಲ ಇತ್ತು. ಅದರಲ್ಲಿ ಕಾಯಿ, ಕರ್ಪೂರ, ಬಾನ ಬತ್ತಿ ಇದೆ ಎಂದು ನಾನು ಖಾತ್ರಿ ಮಾಡಿಕೊಂಡಿದ್ದೆ. ಪದ್ದಕ್ಕ ಇಡೀ ರಾತ್ರಿ ಎದ್ದು ಜಳಕಾ ಮಾಡಿ ದೇವಿಗಾಗಿ ಕಡಬು, ಕರ್ಜಿ ಕಾಯಿ ಮಾಡಿಕೊಂಡು ಬಂದಿರುವುದು ತಿಳಿಯಿತು.

ಇನ್ನೂ ಬೆಳಕು ಮೂಡಿರಲಿಲ್ಲ ನಾನು ಪದ್ದಕ್ಕ ದೇವಿಯ ಸನ್ನಿಧಾನದಲ್ಲಿ ಬಂದು ಹಾಜರಾದೆವು. ನಾನು ಕಸಕಡ್ಡಿ ಗುಡಿಸಿ, ದೇವಿಯ ಮುಂದೆ ಒಂದಿಷ್ಟು ನೀರು ಚಿಮುಕಿಸಿದೆ. ಪದ್ದಕ್ಕ ದೇವಿಯ ಮುಂದೆ ರಂಗೋಲಿ ಬಿಡಿಸಿದಳು. ನಾನು ಅವರೆ ಹೂ ಕಿತ್ತುಕೊಳ್ಳಲು ನಾಕೈದು ಹೆಜ್ಜೆ ಮುಂದೆ